ಜಾಹೀರಾತು

# ಕಂಪ್ಯೂಟರೀಕೃತ ಮಂಡಿ ಚಿಪ್ಪು ಬದಲಾವಣೆಯ ಶಸ್ತ್ರಚಿಕಿತ್ಸೆ



ಇಂದಿನ ಆಧುನಿಕ ಜೀವನಶೈಲಿಯ ಕಂಫರ್ಟ್‌ಗಳಿಗೆ ಒಗ್ಗಿ ಹೋಗಿರುವ ಬಹುತೇಕ ಜನರಿಗೆ ಒಂದಲ್ಲ ಒಂದು ಆರೋಗ್ಯ ಸಮಸ್ಯೆಗಳು ಇದ್ದೇ ಇರುತ್ತವೆ. ಅದರಲ್ಲೂ ಮುಖ್ಯವಾಗಿ ಐವತ್ತರ ವಯಸ್ಸಿನ ನಂತರ ನಿಧಾನವಾಗಿ ಕಾಣಿಸಿಕೊಳ್ಳುವ ಮಂಡಿ ನೋವು ಕ್ರಮೇಣ ನಡೆದಾಡಲಾಗದ ಪರಿಸ್ಥಿತಿಗೆ ತಂದು ಬಿಡುತ್ತದೆ. ದೈನಂದಿನ ಓಡಾಟಕ್ಕೂ ಪರಾವಲಂಬಿಯಾಗಬೇಕಾದ ದಯನೀಯ ಸ್ಥಿತಿಗೆ ಮಂಡಿ ನೋವು ವ್ಯಕ್ತಿಯನ್ನು ತಂದು ನಿಲ್ಲಿಸಿಬಿಡುತ್ತದೆ. ಇಂತಹ ಸನ್ನಿವೇಶದಲ್ಲಿ ಮಂಡಿ ನೋವಿಗೆ ಯಾವ ರೀತಿಯ ಚಿಕಿತ್ಸೆ ಯಾರಿಗೆ ಸೂಕ್ತ? ಏನು ಮಾಡಬೇಕು ? ಮುಂತಾದ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

**ಸಾವಿರಾರು ಮಂಡಿ ಚಿಪ್ಪು ಬದಲಾವಣೆಗಳ ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿರುವ**

## ಡಾ. ಬಸವರಾಜ ಎಸ್ ಕ್ಯಾವಟರ








### ಮಂಡಿ ನೋವಿಗೆ ಶಸ್ತ್ರಚಿಕಿತ್ಸೆಯೊಂದೇ ಪರಿಹಾರವೇ?

ವಯಸ್ಸು, ವ್ಯಕ್ತಿಯ ದೈಹಿಕ ಚಟುವಟಿಕೆ ಮತ್ತು ಆರೋಗ್ಯ ಸ್ಥಿತಿ ಮತ್ತು ಎಕ್ಸ್ ರೇ ಇವುಗಳನ್ನೆಲ್ಲಾ ಪರಿಶೀಲಿಸಿ, ಮಂಡಿಗಾಗಿರುವ ಹಾನಿಯ ತೀವ್ರತೆಯ ಆಧಾರದ ಮೇಲೆ ಶಸ್ತ್ರಚಿಕಿತ್ಸೆ ಬೇಕೆ? ಬೇಡವೇ ? ಎಂದು ನಿರ್ಧರಿಸಲಾಗುವುದು.

### ಮಂಡಿ ಚಿಪ್ಪು ಬದಲಾವಣೆಗೆ ಪ್ರಸ್ತುತ ಯಾವ ರೀತಿಯ ಶಸ್ತ್ರಚಿಕಿತ್ಸೆ ಮಾಡುತ್ತೀರಿ?

ಕಂಪ್ಯೂಟರ್ ನೆರವಿನಿಂದ ಮಾಡಲ್ಪಡುವ ಮಂಡಿ ಚಿಪ್ಪು ಬದಲಾವಣೆ ಶಸ್ತ್ರಚಿಕಿತ್ಸೆ (**Computer Assisted Total Knee Replacement**) ಈಗ ತುಂಬಾ ಪ್ರಸಿದ್ಧಿಯಾಗಿದೆ. ಈ ತಂತ್ರಜ್ಞಾನದಿಂದ ಕರಾರುವಕ್ಕಾಗಿ ಮೂಳೆಗಾದ ಹಾನಿ ಎಲ್ಲಿ, ಎಷ್ಟು ಎಂದು ತಿಳಿಯುವುದಲ್ಲದೆ ಎಷ್ಟು ಸೆ.ಮಿ ಮೂಳೆ ಮಾತ್ರ ಕತ್ತರಿಸಬೇಕೆಂಬ ನಿಖರ ಮಾಹಿತಿಯನ್ನು ನೀಡಿ ರೋಗಿಗಾಗುವ ಹೆಚ್ಚಿನ ತೊಂದರೆಯನ್ನು ನಿವಾರಿಸುತ್ತದೆ. ಅಲ್ಲದೆ ಮಂಡಿಯಲ್ಲಿ ಜೋಡಿಸಲಾದ ಇಂಪ್ಲಾಂಟ್‌ನ ಬಗ್ಗೆ ಸಂಪೂರ್ಣ ಚಿತ್ರಣ ನೀಡುವ ಕಂಪ್ಯೂಟರ್ ಅಸಿಸ್ಟೆಡ್ ಆಪರೇಶನ್ 50% ನೋವಿನ ಪ್ರಮಾಣವನ್ನು ಕಡಿಮೆ ಮಾಡಿ ತ್ವರಿತವಾಗಿ ರೋಗಿಯು ಚೇತರಿಸಿಕೊಳ್ಳಲು ನೆರವಾಗುತ್ತದೆ.

### ಕಂಪ್ಯೂಟರ್ ನೆರವಿನಿಂದ ಮಾಡಲ್ಪಡುವ ಮಂಡಿ ಚಿಪ್ಪು ಬದಲಾವಣೆ ಶಸ್ತ್ರಚಿಕಿತ್ಸೆಯಲ್ಲಿ ಅಳವಡಿಸುವ ಇಂಪ್ಲಾಂಟ್ ಎಷ್ಟು ಪರಿಣಾಮಕಾರಿ?

ಈ ಶಸ್ತ್ರಚಿಕಿತ್ಸೆಯಲ್ಲಿ ಸಂಬಂಧಿತ ಸಮಸ್ಯೆಗಳು ಅತೀ ಕನಿಷ್ಠ ಎನ್ನಬಹುದಲ್ಲದೆ ಇಂಪ್ಲಾಂಟ್‌ನ ಕಾರ್ಯಕ್ಷಮತೆ ಇಪ್ಪತ್ತೈದು ವರುಷಗಳವರೆಗೆ ಇರುವ ಖಾತರಿ ಕೂಡಾ ಸಿಗುತ್ತದೆ.

### ಒಟ್ಟಿಗೆ ಎರಡೂ ಕಾಲುಗಳ ಮಂಡಿ ಚಿಪ್ಪಿನ ಬದಲಾವಣೆಯ ಶಸ್ತ್ರಚಿಕಿತ್ಸೆ ಮಾಡುವುದು ಸುರಕ್ಷಿತವಾ?

ವಯಸ್ಸು ಮತ್ತು ಆರೋಗ್ಯ ಸಮಸ್ಯೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅವುಗಳ ಆಧಾರದ ಮೇಲೆ ಮೂರು ದಿನಗಳ ಅಂತರದಲ್ಲಿ ಎರಡು ಕಾಲುಗಳ ಮಂಡಿಚಿಪ್ಪಿನ ಶಸ್ತ್ರಚಿಕಿತ್ಸೆ ಯನ್ನು ಮಾಡಬಹುದು.

### ಮಂಡಿ ನೋವು ಆರಂಭದ ಹಂತದಲ್ಲಿರುವಾಗಲೇ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೆ ಪರಿಣಾಮಕಾರಿಯಾಗಬಹುದೇ?

ಖಂಡಿತಾ ಇಲ್ಲ. ಕಾಲು ನೋವು ಬಂದಾಕ್ಷಣ ಆಪರೇಶನ್ ಮಾಡಿಸಿಕೊಳ್ಳುವುದು ಸೂಕ್ತವಲ್ಲ. ಮಂಡಿಚಿಪ್ಪು ಸಂಪೂರ್ಣವಾಗಿ ಹಾನಿಗೊಳಗಾದಾಗ ಮಾತ್ರ ಶಸ್ತ್ರಚಿಕಿತ್ಸೆಯ ಮೊರೆ ಹೋಗುವುದು ಒಳ್ಳೇದು.

### ಇತ್ತೀಚಿನ ದಿನಗಳಲ್ಲಿ ಮಂಡಿಚಿಪ್ಪಿನ ಬದಲಾವಣೆಯ ಶಸ್ತ್ರಚಿಕಿತ್ಸೆ ಜಾಸ್ತಿಯಾಗಿದೆಯಾ?

ಹೌದು. ಆಧುನಿಕ ತಂತ್ರಜ್ಞಾನದ ನೆರವು, ಅತೀ ಕಡಿಮೆ ರಿಸ್ಕ್, ಮತ್ತು ಶೀಘ್ರವಾಗಿ ನೋವಿನಿಂದ ಮುಕ್ತಿ ಪಡೆಯುವ ಅವಕಾಶ ಇರುವುದರಿಂದ ಈ ಶಸ್ತ್ರಚಿಕಿತ್ಸೆ ತುಂಬಾ ಸಾಮಾನ್ಯವಾಗಿಬಿಟ್ಟಿದೆ. ಕಳೆದ ಹನ್ನೆರಡು ವರ್ಷಗಳ ಅನುಭವದಲ್ಲಿ ಸಾವಿರಾರು ಮಂಡಿಚಿಪ್ಪಿನ ಬದಲಾವಣೆ ಮತ್ತು ಮೂಳೆ ಸಂಬಂಧಿತ ಶಸ್ತ್ರಚಿಕಿತ್ಸೆಯನ್ನು ಮಾಡಿ ಯಶಸ್ವಿಯಾಗಿದ್ದೇನೆ.

**Dr. Basavaraj S Kyavater**
M.S. (Ortho) M.Ch.(Ortho) U.K
Consultant Joint Replacement & Orthopaedic Surgeon
Sagar Hospitals, Bangalore

Ph : 9591991905 / 8618606586
E-mail: bskortho@gmail.com
Web: www.bskortho.com
Web: www.sagarhospitals.in